**ದಿನಾಂಕ: 09–07–2019 ರಂದು ಮೆ॥ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ (ಎಂಆರ್‌ಪಿಎಲ್) ಇವರು ಸರ್ವೆ ನಂ.82/1, 82/2, 83/ಪಿ, 84/1ಎ, 84/2, 85/1, 85/2, ಹನಗವಾಡಿ ಗ್ರಾಮ, 2ನೇ ಹಂತ, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಇಲ್ಲಿ 60 ಕೆಎಲ್‌ಪಿಡಿ ಎರಡನೇ ತಲೆಮಾರಿನ (2ಜಿ) ಇಥೆನಾಲ್ ಉತ್ಪಾದನೆಗೆ ಹೊಸ ಉದ್ದಿಮೆಯನ್ನು ಸ್ಥಾಪಿಸಲು ಉದ್ದೇಶಿಸಿರುವ ಬಗ್ಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡಾವಳಿಗಳು.**

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : ಮೆ॥ ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್), ಕುತೇತ್ತೂರು, ಕಾಟಿಪಳ್ಳ ಹಳ್ಳಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ |
| ದಿನಾಂಕ | : 09–07–2019. |
| ಅಧ್ಯಕ್ಷತೆ | : ಶ್ರೀ ಜಿ.ಎನ್. ಶಿವಮೂರ್ತಿ, ಭಾ.ಆ.ಸೇ.<br>ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,<br>ಜಿಲ್ಲಾ ಪರಿಸರ ಸಾರ್ವಜನಿಕ ಸಮಿತಿ,<br>ದಾವಣಗೆರೆ ಜಿಲ್ಲೆ. |
| ಹಾಜರಿದ್ದ ಅಧಿಕಾರಿಗಳ ವಿವರ | : **ಅನುಬಂಧ–1** |
| ಯೋಜನಾದಾರರ ವತಿಯಿಂದ ಹಾಜರಿದ್ದ ಪ್ರತಿನಿಧಿಗಳ ವಿವರ | : **ಅನುಬಂಧ–2** |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : **ಅನುಬಂಧ–3** |
| ಸಾರ್ವಜನಿಕರಿಂದ ಸ್ವೀಕೃತವಾದ ಅಹವಾಲುಗಳು | : **ಅನುಬಂಧ–4** |

**ಪೀಠಿಕೆ:–**

ಮೆ॥ ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್), ಕುತೇತ್ತೂರು,, ಕಾಟಿಪಳ್ಳ ಹಳ್ಳಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರು ಸರ್ವೆ ನಂ.82/1, 82/2, 83/ಪಿ, 84/1ಎ, 84/2, 85/1, 85/2, ಹನಗವಾಡಿ ಗ್ರಾಮ, 2ನೇ ಹಂತ, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ, ಇಲ್ಲಿ 60 ಕೆಎಲ್‌ಪಿಡಿ ಎರಡನೇ ತಲೆಮಾರಿನ (2ಜಿ) ಇಥೆನಾಲ್ ಉತ್ಪಾದನೆಗೆ ಹೊಸ ಘಟಕವನ್ನು ಸ್ಥಾಪಿಸಲು ಪ್ರಸ್ತಾಪಿಸಿರುತ್ತಾರೆ.

ಪರಿಸರ ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ ಇವರು ದಿನಾಂಕ: 14.09.2006 ರಂದು ಹೊರಡಿಸಿರುವ ಪರಿಸರ ಅಘಾತ ಅಂದಾಜೀಕರಣ ಅಧಿಸೂಚನೆ ಪ್ರಕಾರ ಸದರಿ ಯೋಜನೆಗೆ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ, ನಿರ್ದೇಶಕರು ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ ಇವರು ಸದರಿ ಯೋಜನೆಗೆ Terms of References (ಟಿ.ಓ.ಅರ್) ಅಂತಿಮಗೊಳಿಸಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆ ನಡೆಸಲು ಕೋರುವಂತೆ ಯೋಜನಾದಾರರಿಗೆ ತಿಳಿಸಿರುತ್ತಾರೆ. ಅದರಂತೆ ಈ ಯೋಜನೆಗೆ "ಕರಡು ಪರಿಸರ ಅಘಾತ ಅಂದಾಜೀಕರಣ" ವರದಿಯನ್ನು ಮತ್ತು ಇದರ ಕನ್ನಡ ಮತ್ತು ಇಂಗ್ಲೀಷ್ ಅವತರಣಿಕೆಯ ಸಂಕ್ಷಿಪ್ತ ವರದಿಯನ್ನು ಮಂಡಳಿಗೆ ಸಲ್ಲಿಸಿ ಕೇಂದ್ರ ಸರ್ಕಾರದ ಪರಿಸರ ಅಘಾತ ಅಧ್ಯಯನ ಅಧಿಸೂಚನೆ–2006ರ ಪ್ರಕಾರ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಮೆ॥ ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್), ಕುತೇತ್ತೂರು,, ಕಾಟಿಪಳ್ಳ ಹಳ್ಳಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರು ಕೋರಿ ಕೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಯೋಜನೆಗೆ ಸಂಬಂದಪಟ್ಟಂತೆ ಪರಿಸರ ಸಾರ್ವಜನಿಕ ಸಭೆಯನ್ನು ಸರ್ವೆ ನಂ.82/1, 82/2, 83/ಪಿ, 84/1ಎ, 84/2, 85/1, 85/2, ಹನಗವಾಡಿ ಗ್ರಾಮ, 2ನೇ ಹಂತ, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ಇಲ್ಲಿ **ದಿನಾಂಕ:09–07–2019 ರಂದು ಬೆಳಗ್ಗೆ 11:00 ಘಂಟೆಗೆ** ನಿಗದಿಪಡಿಸಲಾಗಿತ್ತು.

ಮುಂದುವರೆದು, ಮೆ॥ ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್), ಕುತೇತನೂರು, ಕಾಟಿಪಳ್ಳ ಹಳ್ಳಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರ 60 ಕೆಎಲ್‌ಪಿಡಿ ಎರಡನೇ ತಲೆಮಾರಿನ (2ಜಿ) ಇಥೆನಾಲ್ ಉತ್ಪಾದನೆಗೆ ಹೊಸ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುವ ಯೋಜನೆಗೆ ಕುರಿತಂತೆ **ದಿನಾಂಕ: 09-07-2019 ರಂದು** ಬೆಳಿಗ್ಗೆ 11:00 ಘಂಟೆಗೆ ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಹನಗವಾಡಿ ಗ್ರಾಮದ ಸರ್ವೆ ನಂ.82/1, 82/2, 83/ಪಿ, 84/1ಎ, 84/2, 85/1, 85/2, 2ನೇ ಹಂತ, ಕೆಐಎಡಿಬಿ ಕೈಗಾರಿಕಾ ಪ್ರದೇಶ ಇಲ್ಲಿ ಪರಿಸರ ಸಾರ್ವಜನಿಕ ಸಭೆ ನಡೆಸಲು ಉದ್ದೇಶಿಸಲಾಯಿತು.

ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಪರಿಸರ ಸಾರ್ವಜನಿಕ ಸಭೆಯ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಇಂಗ್ಲೀಷ್ ಪತ್ರಿಕೆಯಾದ **"ಡೆಕ್ಕಾನ್ ಹೆರಾಲ್ಡ್"** ಮತ್ತು ಕನ್ನಡ ಪತ್ರಿಕೆಯಾದ **"ವಿಜಯವಾಣಿ"** ದಿನ ಪತ್ರಿಕೆಗಳಲ್ಲಿ ದಿನಾಂಕ: 07-06-2019 ರಂದು ನೀಡಲಾಗಿರುತ್ತದೆ. ಅಲ್ಲದೇ ಸ್ಥಳೀಯರ ಮಾಹಿತಿಗಾಗಿ ಸ್ಥಳೀಯ ಕನ್ನಡ ದಿನ ಪತ್ರಿಕೆ ಯಾದ **"ಜನತಾವಾಣಿ"**ಯಲ್ಲೂ ಸಹ ದಿನಾಂಕ:11-06-2019 ರಂದು ಪತ್ರಿಕಾ ಪ್ರಕಟಣೆ ನೀಡಲಾಗಿರುತ್ತದೆ. ಪತ್ರಿಕಾ ಪ್ರಕಟಣೆಯಲ್ಲಿ, ಯೋಜನಾ ಸ್ಥಳದಲ್ಲಿ ವಾಸವಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆ, ಅಭಿಪ್ರಾಯ, ಟೀಕೆ-ಟಿಪ್ಪಣಿ ಹಾಗೂ ಅಹವಾಲುಗಳನ್ನು ಮೌಖಿಕವಾಗಿ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಭೆ ಸಮಿತಿ (ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ) ಇವರಿಗೆ, ಅಧಿಸೂಚನೆ ಪ್ರಕಟವಾದ 30 ದಿನಗಳೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಯೋಜನೆಯ ಪರಿಸರ ಅಘಾತ ಅಂದಾಜೀಕರಣ ವರದಿ ಹಾಗೂ ಕಾರ್ಯಕಾರಿ ಸಾರಾಂಶಗಳ ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ ಜಿಲ್ಲಾಧಿಕಾರಿಗಳ ಕಛೇರಿ, ದಾವಣಗೆರೆ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ದಾವಣಗೆರೆ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ದಾವಣಗೆರೆ, ಗ್ರಾಮ ಪಂಚಾಯಿತಿ, ಹನಗವಾಡಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ, ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ, ಕೇಂದ್ರ ಅರಣ್ಯ, ಪರಿಸರ ಮತ್ತು ಹವಮಾನ ಬದಲಾವಣೆ ಸಚಿವಾಲಯ, (ದಕ್ಷಿಣ ವಲಯ ಕಛೇರಿ), ಬೆಂಗಳೂರು ಹಾಗೂ ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೇಂದ್ರ ಕಛೇರಿ, ಬೆಂಗಳೂರು ಈ ಸ್ಥಳಗಳಲ್ಲಿ ಇಡಲಾಗಿತ್ತು.

**ದಿನಾಂಕ:** 09-07-2019 **ರಂದು** ಬೆಳಿಗ್ಗೆ 11:00 ಘಂಟೆಗೆ ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಹನಗವಾಡಿ ಗ್ರಾಮದ ಸರ್ವೆ ನಂ.82/1, 82/2, 83/ಪಿ, 84/1ಎ, 84/2, 85/1, 85/2, 2ನೇ ಹಂತ, ಕೆಐಎಡಿಬಿ ಕೈಗಾರಿಕಾ ಪ್ರದೇಶ ಇಲ್ಲಿ ಪರಿಸರ ಸಾರ್ವಜನಿಕ ಸಭೆ ನಡೆಸಲಾಯಿತು. ಶ್ರೀ ಕೆ.ಬಿ. ಕೊಟ್ರೇಶ್, ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ ಇವರು ಶ್ರೀ ಜಿ.ಎನ್. ಶಿವಮೂರ್ತಿ,ಭಾ.ಆ.ಸೇ., ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ, ಶ್ರೀ ಸಿ.ಡಿ. ಕುಮಾರ್, ಪ್ರಾದೇಶಿಕ ಹಿರಿಯ ಪರಿಸರ ಅಧಿಕಾರಿಗಳು, ವಿಭಾಗೀಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಚಿತ್ರದುರ್ಗ, ಕೆ.ಐ.ಎ.ಡಿ.ಬಿ. ಅಧಿಕಾರಿಗಳು, ಪೋಲೀಸ್ ಅಧಿಕಾರಿ/ಸಿಬ್ಬಂದಿ ಹಾಗೂ ಯೋಜನೆಯ ಪ್ರತಿನಿಧಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಸಚಿವಾಲಯರವರ ಪರಿಸರ ಅಘಾತ ಅಧಿಸೂಚನೆ 2006 ರನ್ವಯ, ಸದರಿ ಪರಿಸರ ಸಾರ್ವಜನಿಕ ಸಭೆ ನಡೆಸಲು ತೆಗೆದುಕೊಂಡ ಕ್ರಮವನ್ನು ವಿವರಿಸಿದರು ಮತ್ತು ಉದ್ದೇಶಿತ ಪ್ರಸ್ತಾವನೆಯ ಪರಿಸರ ಅಘಾತ ಅಧಿಸೂಚನೆ 2006 ರ ವ್ಯಾಪ್ತಿಯಲ್ಲಿ ಸೇರಿರುವುದರಿಂದ ಪರಿಸರ ಸಾರ್ವಜನಿಕ ಸಭೆ ನಡೆಸಬೇಕಾಗಿರುವ ಕುರಿತು ನೆರೆದಿದ್ದ ಸಾರ್ವಜನಿಕರಿಗೆ ಸಭೆಯ ಉದ್ದೇಶವನ್ನು ವಿವರಿಸಿ, ಸಭೆಯ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರಲ್ಲಿ ಸದರಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು. ಅದರಂತೆ, **ಶ್ರೀ ಜಿ.ಎನ್. ಶಿವಮೂರ್ತಿ, ಭಾ.ಆ.ಸೇ. ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ** ಇವರು ಸಭೆಯ ಮಹತ್ವವನ್ನು ತಿಳಿಸಿ ಮೆ॥ ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ (ಎಂಆರ್‌ಪಿಎಲ್) ಲಿಮಿಟೆಡ್‌ನ ಪ್ರತಿನಿಧಿಯವರಿಗೆ

ಸದರಿ ಕಂಪನಿಯ ಪ್ರತಿನಿಧಿಯಾದ ಶ್ರೀ ಯು.ವಿ. ಐತಾಲ್, ಪ್ರಧಾನ ವ್ಯವಸ್ಥಾಪಕರು, ಇವರು ಸಭೆಯಲ್ಲಿ ಮಾತನಾಡುತ್ತಾ, ಭಾರತ ಸರ್ಕಾರವು ದೇಶಾದ್ಯಂತ ಒಟ್ಟು 12 ಸ್ಥಳಗಳಲ್ಲಿ ಎರಡನೇ ತಲೆಮಾರಿನ (2ಜಿ) ಇಥೇನಾಲ್ ಘಟಕಗಳನ್ನು ಸ್ಥಾಪಿಸಲು ಸರ್ಕಾರಿ ಸ್ವಾಮ್ಯದ ತೈಲ ಸಂಸ್ಕರಣಾ ಸಂಸ್ಥೆಗಳಿಗೆ ಆದೇಶಿಸಿರುತ್ತದೆ. ಇದರನ್ವಯ ಕರ್ನಾಟಕ ರಾಜ್ಯದಲ್ಲಿ ಎರಡನೇ ತಲೆಮಾರಿನ (2ಜಿ) ಇಥನಾಲ್ ಘಟಕವನ್ನು ಸ್ಥಾಪಿಸಲು ಮೆ॥ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ ಆದೇಶ ಪಡೆದಿದೆ. ಮೆ॥ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್, (ಭಾರತ ಸರ್ಕಾರದ ಉದ್ಯಮ ಮತ್ತು ಓಎನ್‌ಜಿಸಿಯ ಅಂಗಸಂಸ್ಥೆ), ಇದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಅಡಿಯಲ್ಲಿ ಕೇಂದ್ರ ಸರ್ಕಾರದ ಸಾರ್ವಜನಿಕ ವಲಯದಲ್ಲಿ 'ಎ' ದರ್ಜೆಯ ಮಿನಿರತ್ನ ಉದ್ಯಮವೆಂದು ಅನುಸೂಚಿತವಾಗಿದೆ ಮತ್ತು ಇದು ಓಎನ್‌ಜಿಸಿಯ ಅಂಗಸಂಸ್ಥೆಯಾಗಿದೆ. ಸದರಿ ಕಂಪನಿಯು ಕಚ್ಛಾ ತೈಲ ಸಂಸ್ಕರಣಾ ಘಟಕವನ್ನು ಕರ್ನಾಟಕ ರಾಜ್ಯದ ಕರಾವಳಿ ಭಾಗದ ಮಂಗಳೂರಿನಲ್ಲಿ ಸ್ಥಾಪಿಸಲಾಗಿರುತ್ತದೆ. ಸದರಿ ಕಂಪನಿಯು ಕಚ್ಛಾ ಪೆಟ್ರೋಲಿಯಂನ ಸಂಸ್ಕರಣೆ ಮತ್ತು ಮಾರಾಟದಲ್ಲಿ ತೊಡಗಿರುತ್ತದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಕರ್ನಾಟಕದಲ್ಲಿ (ಬಳಸಬಹುದಾದಂತಹ ಕೃಷಿ ತ್ಯಾಜ್ಯವಸ್ತುಗಳಾದ ಭತ್ತದ ಒಣ ಹುಲ್ಲು, ಮೆಕ್ಕೆಜೋಳದ ದಿಂಡು, ಜೋಳದ ದಂಟುಗಳು) ಎಥೆನಾಲ್ ಘಟಕವನ್ನು ಸ್ಥಾಪಿಸಲು ಮೆ॥ ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ (ಎಂಆರ್‌ಪಿಎಲ್) ಲಿಮಿಟೆಡ್‌ಗೆ ನಿರ್ದೇಶಿಸಿರುತ್ತಾರೆ. ಸದರಿ ಕಂಪನಿಯು ಕರ್ನಾಟಕ ರ‍್ಯಾಜದ ವಿವಿಧ ಜಿಲ್ಲೆಗಳಲ್ಲಿ ಜೈವಿಕ ಮೌಲ್ಯ ಮಾಪನ ನಡೆಸಿ, ರಾಣೆಬೇನ್ನೂರು, ಗೋಖಾಕ್, ಸಿಂಧನೂರು ಮತ್ತು ಹೆಚ್.ಡಿ.ಕೋಟೆಗಳನ್ನು ಕ್ಲಸ್ಟರ್‌ಗಳನ್ನಾಗಿ ಗುರುತ್ತಿಸಲಾಗಿರುತ್ತದೆ. ಜೈವಿಕ ಮೌಲ್ಯ ಮಾಪನ ವರದಿಯ ಪ್ರಕಾರ ಹಾವೇರಿ ಜಿಲ್ಲೆಯ ರಾಣೆಬೇನ್ನೂರು ಕ್ಲಸ್ಟರ್‌ನ್ನು ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ. (ಬಳ್ಳಾರಿ ಜಿಲ್ಲೆಯ 3 ತಾಲ್ಲೂಕು, ಚಿತ್ರದುರ್ಗ ಜಿಲ್ಲೆಯ 2 ತಾಲ್ಲೂಕ, ದಾವಣಗೆರೆ ಜಿಲ್ಲೆಯ 6 ತಾಲ್ಲೂಕು, ಹಾವೇರಿ ಜಿಲ್ಲೆಯ 7 ತಾಲ್ಲೂಕು, ಶಿವಮೊಗ್ಗ ಜಿಲ್ಲೆಯ 5 ತಾಲ್ಲೂಕು, ಗದಗ ಜಿಲ್ಲೆಯ 2 ತಾಲ್ಲೂಕು ಮತ್ತು ಧಾರವಾಡ 1 ತಾಲ್ಲೂಕು) ಉದ್ದೇಶಿತ ಘಟಕದ ಸ್ಥಾಪನೆಗೆ ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕು, ಹನಗವಾಡಿ ಗ್ರಾಮದ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ. ಉದ್ದೇಶಿತ ಘಟಕಕ್ಕೆ ಬೇಕಾಗುವ ಕೃಷಿ ತ್ಯಾಜ್ಯವನ್ನು ವಿವಿಧ ಜಿಲ್ಲೆಗಳಿಂದ ಸಂಗ್ರಹಿಸಿ ಉದ್ದೇಶಿತ ಘಟಕಕ್ಕೆ ಸ್ಥಳಾಂತರಿಸಲಾಗುವುದು.

ಮೆ॥ ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ (ಎಂಆರ್‌ಪಿಎಲ್) **ಲಿಮಿಟೆಡ್‌ನ ಪರವಾಗಿ ABC Techno Labs India Pvt. Ltd. ರವರ ಪರಿಸರ ಸಲಹೆಗಾರರು** ಉದ್ದೇಶಿತ ಯೋಜನೆಯ ತಾಂತ್ರಿಕ ವಿಷಯ ಕುರಿತು ಮಾತನಾಡುತ್ತಾ, ಉದ್ದೇಶಿತ ಯೋಜನೆಯ ಕಾರ್ಯಚಟುವಟಿಕೆಯಿಂದ ಆಗಬಹುದಾದ ತೊಂದರೆ ಮತ್ತು ಅದಕ್ಕೆ ಪರಿಹಾರೋಪಾಯಗಳನ್ನು ಸಭೆಯಲ್ಲಿ ವಿವರಿಸಿದರು.

**ಈ ಕೆಳಕಂಡಂತೆ ಸಾರ್ವಜನಿಕರು ತಮ್ಮ ಅಭಿಪ್ರಾಯ ಮತ್ತು ಅನಿಸಿಕೆಗಳನ್ನು ವ್ಯಕ್ತಪಡಿಸಿದರು.**

**1. ಶ್ರೀಮತಿ ಶಾರದಮ್ಮ ಜಯಪ್ಪ, ಹನಗವಾಡಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.**

ಇವರು ಸಭೆಯಲ್ಲಿ ಮಾತನಾಡುತ್ತಾ, ಸದರಿ ಕಂಪನಿಯ ಉದ್ದೇಶಿತ ಯೋಜನೆಗೆ ಸಂಬಂಧಿಸಿದಂತೆ ನಮ್ಮ ಭೂಮಿಯನ್ನು ಪಡೆಯಲಾಗಿದೆ. ಆದರೆ ನಾವು ನಮ್ಮ ಜಮೀನನ್ನು ಸದರಿ ಕಂಪನಿಗೆ ನೀಡಲು ಮೊದಲಿನಿಂದಲೂ ಒಪ್ಪಿಲ್ಲ. ಈಗಲೂ ಒಪ್ಪುವುದಿಲ್ಲ. ನನಗೆ ಮೂವರು ಗಂಡು ಮಕ್ಕಳಿದ್ದಾರೆ. ಮೊದಲ ಮಗ ಬಿ.ಎಸ್ಸಿ. ಬಿ.ಎಡ್., ಎರಡನೇ ಮಗ ಐಟಿಐ ಡಿಪ್ಲೋಮೋ ಮತ್ತು ಮೂರನೇ ಮಗ ಎಸ್.ಎಸ್.ಎಲ್.ಸಿ.ವರೆಗೆ ಓದಿದ್ದಾನೆ. ಮಕ್ಕಳಿಗೆ ಉದ್ಯೋಗವಿಲ್ಲ. ನಮ್ಮ ಕುಟುಂಬಕ್ಕೆ ಈ ಜಮೀನು ಆಧಾರವಾಗಿದೆ. ಭೂಮಿ ಪರಬಾರೆ ಕುರಿತು ಹಲವಾರು ನೋಟಿಸ್‌ಗಳು ನಮಗೆ ಬಂದಿರುತ್ತವೆ. ಯಾವುದೇ ಕಾರಣಕ್ಕೂ ನಾವು ಈ ಭೂಮಿಯನ್ನು ನೀಡುವುದಿಲ್ಲ.

**2. ಶ್ರೀ ಬಿ. ಮಂಜಪ್ಪ, ಹನಗವಾಡಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.**

ಇವರು ಸಭೆಯಲ್ಲಿ ಮಾತನಾಡುತ್ತಾ, ಹನಗವಾಡಿ ಗ್ರಾಮದಲ್ಲಿ ಸದರಿ ಕಂಪನಿಯ ಉದ್ದೇಶಿತ ಇಥೆನಾಲ್ ಘಟಕ ಸ್ಥಾಪಿಸಲು ರಾಜ್ಯ ಸರ್ಕಾರ ನಮ್ಮ ಜಮೀನು ತೆಗೆದುಕೊಂಡಿದೆ. ಆದರೆ ನಮಗೆ ಎಕರೆಗೆ ರೂ.28 ಲಕ್ಷ ಪರಿಹಾರ ನೀಡಿದೆ. ಆದರೆ ಈ ಭೂಮಿಯನ್ನು ಕೆಐಎಡಿಬಿ ಅಧಿಕಾರಿಗಳು ಎಂ.ಆರ್.ಪಿ.ಎಲ್. ಕಂಪನಿಗೆ ರೂ.1,10,29,000 ಗೆ ಮಂಜೂರು ಮಾಡಿದ್ದಾರೆ. ಇದರಿಂದ ರೈತರಿಗೆ ಮೋಸ ಮಾಡಿದಂತಾಗಿದೆ. ದೊಡ್ಡ ಮೊತ್ತದ ವ್ಯತ್ಯಾಸ ಇದಾಗಿದೆ. ಕೆಲವರಿಗೆ ಇನ್ನೂ ಪರಿಹಾರದ ಮೊತ್ತ ಬಂದಿಲ್ಲ. ಪರಿಹಾರದ ಮೊತ್ತವನ್ನು ಬಡ್ಡಿ ಸಮೇತ ನೀಡಿ, ಈ ಹಿಂದೆ ಕೈಗಾರಿಕಾ ಪ್ರದೇಶ ಸ್ಥಾಪನೆಗೆ ಜಮೀನುಗಳನ್ನು ನೀಡಿದ ಸಮಯದಲ್ಲಿ ಜಮೀನು ನೀಡಿದ ರೈತರ ಮಕ್ಕಳಿಗೆ ಉದ್ಯೋಗಾವಕಾಶ ಕಲ್ಪಿಸುವಂತೆ ಅಂದಿನ ಮಾನ್ಯ ಜಿಲ್ಲಾಧಿಕಾರಿಗಳಲ್ಲಿ ಕೋರಿದಾಗ, ಸದರಿ ಕೈಗಾರಿಕಾ ಪ್ರದೇಶದಲ್ಲಿ ಗುಡಿಕೈಗಾರಿಕೆಗಳು ಸ್ಥಾಪನೆಗೊಂಡಲ್ಲಿ ಉದ್ಯೋಗ ಒದಗಿಸುವುದು ಕಷ್ಟವಾಗಬಹುದು, ಈ ಭಾಗದಲ್ಲಿ ದೊಡ್ಡ ಕೈಗಾರಿಕೆಗಳು ಬಂದಲ್ಲಿ ಉದ್ಯೋಗ ನೀಡುವ ಭರವಸೆಯನ್ನು ನೀಡಿದ್ದರು, ಆದ್ದರಿಂದ ಜಮೀನು ನೀಡಿದ ರೈತರ ಮಕ್ಕಳಿಗೆ ಅವರ ವಿದ್ಯಾಭ್ಯಾಸಕ್ಕೆ ಅನುಗುಣವಾಗಿ ಉದ್ದೇಶಿತ ಕಂಪನಿಯಲ್ಲಿ ಉದ್ಯೋಗ ಒದಗಿಸಲು ಕೋರಿದರು.

**3. ಶ್ರೀ ಬಿ.ಎಸ್. ವೀರಪ್ಪ, ಹನಗವಾಡಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.**

ಇವರು ಸಭೆಯಲ್ಲಿ ಮಾತನಾಡುತ್ತಾ, ಹನಗವಾಡಿ ಗ್ರಾಮವು ಸುಮಾರು 800 ಎಕರೆ ಕೃಷಿ ಭೂಮಿ ಹೊಂದಿತ್ತು, ಇದರಲ್ಲಿ ಸುಮಾರು 200 ಎಕರೆ ಜಮೀನುಗಳನ್ನು ಅನೇಕ ಕೈಗಾರಿಕಾ ಉದ್ದೇಶಗಳಿಗಾಗಿ ನೀಡಲಾಗಿದೆ. ಗ್ರಾಮದಲ್ಲಿ ಜನಸಂಖ್ಯೆ ಹೆಚ್ಚುತ್ತಿದೆ. ಪ್ರಸ್ತುತ ಗ್ರಾಮದ ಜನಸಂಖ್ಯೆ ಸುಮಾರು 5000ಕ್ಕೆ ತಲುಪಿದೆ. ಜಮೀನುಗಳನ್ನು ಕಳೆದುಕೊಂಡ ರೈತರ ಮಕ್ಕಳಿಗೆ ವಿದ್ಯಾರ್ಹತೆಗೆ ಅನುಗುಣವಾಗಿ ಉತ್ತಮ ಉದ್ಯೋಗದ ಅಗತ್ಯವಿದೆ ಎಂದು ತಿಳಿಸಿದರು. ಉದ್ದೇಶಿತ ಯೋಜನೆಯಿಂದ ಸುತ್ತಮುತ್ತಲಿನ ವೀಳ್ಯದೆಲೆ ತೋಟ ಹಾಗೂ ರೈತರ ಬೆಳೆಗಳಿಗೆ ನಷ್ಟು ಉಂಟಾಗಬಾರದು. ಜಲ ಮತ್ತು ವಾಯು ಮಾಲಿನ್ಯವನ್ನು ನಿಯಂತ್ರಿಸಲು ಕ್ರಮಕೈಗೊಳ್ಳಬೇಕು. ಗ್ರಾಮೀಣ ಪ್ರದೇಶಗಳಿಗೆ ಹೆಚ್ಚಿನ ಒತ್ತು ನೀಡಬೇಕು. ಗ್ರಾಮದಲ್ಲಿರುವ ಪಧವೀದರರಿಗೆ ಹಾಗೂ ಇಂಜಿನೀರಿಂಗ್ ವಿದ್ಯಾಭ್ಯಾಸ ಮಾಡಿದ ರೈತರ ಮಕ್ಕಳಿಗೆ ಉದ್ಯೋಗ ನೀಡಬೇಕೆಂದು ಕೋರಿದರು.

**4. ಶ್ರೀ ಪ್ರಮೋದ್ ಬಣಕಾರ್, ಗ್ರಾಮ ಪಂಚಾಯತ್ ಅಧ್ಯಕ್ಷರು, ಹನಗವಾಡಿ ಗ್ರಾಮ ಪಂಚಾಯಿತಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.**

ಇವರು ಸಭೆಯಲ್ಲಿ ಮಾತನಾಡುತ್ತಾ, ಸದರಿ ಕಂಪನಿಯ ಉದ್ದೇಶಿತ ಯೋಜನೆಗೆ ಜಮೀನು ನೀಡಿದ ರೈತರಿಗೆ ವ್ಯವಸಾಯ ಜಮೀನುಗಳಿರುವುದಿಲ್ಲ. ಅಂತಹ ರೈತರು ಮುಖ್ಯವಾಗಿ ಹೈನುಗಾರಿಕೆ ಅವಲಂಬಿಸಿದ್ದಾರೆ. ಗ್ರಾಮದಲ್ಲಿ ಹೈನುಗಾರಿಕೆಯಿಂದ ಜೀವನ ನಡೆಸುತ್ತಿರುತ್ತಾರೆ. ಸದರಿ ಕಂಪನಿಯ ಉದ್ದೇಶಿತ ಇಥೆನಾಲ್ ಘಟಕಕ್ಕೆ ದಿನಕ್ಕೆ 250 ರಿಂದ 300 ಟನ್ ಒಣಹುಲ್ಲಿನ ಅಗತ್ಯವಿದೆ. ಇಲ್ಲಿನ ರೈತರು ಒಣ ಮತ್ತು ಹಸಿ ಹುಲ್ಲನ್ನು ತಮ್ಮ ದನಕರುಗಳಿಗೆ ಬಳಸುತ್ತಾರೆ. ಇದರಿಂದಾಗಿ ಇಲ್ಲಿನ ಎಲ್ಲಾ ಹುಲ್ಲನ್ನು ಇಥೆನಾಲ್ ಘಟಕಕ್ಕೆ ವಿಲೇವಾರಿ ಮಾಡಲು ಸಾಧ್ಯವಿರುವುದಿಲ್ಲ. ಸದರಿ ಉದ್ದೇಶಿತ ಘಟಕಕ್ಕೆ ಭತ್ತದ ಹುಲ್ಲನ್ನು ಖರೀದಿಸಿದರೆ ದನಕರುಗಳಿಗೆ ಮೇವು ಇಲ್ಲದಂತಾಗುತ್ತದೆ. ಇದಕ್ಕಾಗಿ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಉದ್ದೇಶಿತ ಘಟಕಕ್ಕೆ ಪ್ರತಿ ದಿನ ಸುಮಾರು 2500 ಕಿಲೋ ಲೀಟರ್ ನೀರಿನ ಅವಶ್ಯಕತೆಯಿರುತ್ತದೆ. ತುಂಗಭದ್ರ ನದಿಯಲ್ಲಿ ವರ್ಷ ಪೂರ್ತಿ ನೀರು ಲಭ್ಯವಿಲ್ಲದ ಕಾರಣ, ನದಿ ನೀರಿಗಾಗಿ ಶೇಖರಣಾ ತೊಟ್ಟಿಯನ್ನು ನಿರ್ಮಿಸಿಕೊಳ್ಳಬೇಕು. ಘಟಕದ ಉದ್ದೇಶಕ್ಕಾಗಿ ಹೆಚ್ಚು ಕೊಳವೆಬಾವಿಗಳನ್ನು ಕೊರೆಯಬಾರದು, ಇದರಿಂದ ಅಂತರ್ಜಲಮಟ್ಟ ಕುಸಿಯುತ್ತದೆ. ಕಲುಷಿತವಾಗಬಹುದಾದ ಇಥೆನಾಲ್‌ನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸುವುದರಿಂದ ಸುತ್ತಮುತ್ತಲಿನ ಗ್ರಾಮಸ್ಥರ ಆರೋಗ್ಯದ ಮೇಲೆ ಪರಿಣಾಮ ಬೀರಬಹುದಾಗಿದೆ. ಯಾವುದೇ ರೀತಿಯಲ್ಲಿ ಸೋರಿಕೆ ಆಗದಂತೆ, ದುಷ್ಪರಿಣಾಮ ಬೀರದಂತೆ, ಸುರಕ್ಷತಾ ಕ್ರಮಕೈಗೊಳ್ಳಬೇಕು. ಕಾರ್ಗಿಲ್ ಕಂಪನಿಯಲ್ಲಿ ಸದರಿ ಕಂಪನಿಗಾಗಿ ಜಮೀನು ಕಳೆದುಕೊಂಡ ರೈತರ ಮಕ್ಕಳಿಗೆ ಕೆಳ ದರ್ಜೆಯ ಉದ್ಯೋಗ ನೀಡಿದ್ದಾರೆ. ಇದಾಗಬಾರದು, ಉದ್ದೇಶಿತ ಯೋಜನೆಗೆ ಜಮೀನುಗಳನ್ನು ನೀಡಿದ ರೈತರ ಮಕ್ಕಳಿಗೆ ವಿದ್ಯಾರ್ಹತೆಗೆ ತಕ್ಕಂತೆ ಉದ್ಯೋಗ ನೀಡಬೇಕು. ಅಲ್ಲದೆ ಜಮೀನುಗಳನ್ನು ನೀಡಿದ ರೈತರಿಗೆ ಹೆಚ್ಚಿನ ಪರಿಹಾರದ ಹಣ ನೀಡಬೇಕು. ಉದ್ದೇಶಿತ ಯೋಜನೆಯಿಂದ ಸುತ್ತಮುತ್ತಲಿನ ರೈತರಿಗೆ ಅನಾನುಕೂಲವಾಗಬಾರದು ಎಂದು ತಿಳಿಸಿದರು.

5. **ಶ್ರೀ ಪ್ರವೀಣ, ಕನ್ನಡ ಪ್ರಭ ವರದಿಗಾರರು, ಹನಗವಾಡಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.**

ಇವರು ಸಭೆಯಲ್ಲಿ ಮಾತನಾಡುತ್ತಾ, ಹನಗವಾಡಿ ಗ್ರಾಮದಲ್ಲಿ ಬೆಳೆಗಳನ್ನು ಬೆಳೆಯಲು ಕಡಿಮೆ ಜಮೀನುಗಳಿರುತ್ತವೆ. ಅರ್ಧ ಗ್ರಾಮದ ಜಮೀನುಗಳನ್ನು ಕೈಗಾರಿಕಾ ಪ್ರದೇಶಕ್ಕೆ ನೀಡಿರುತ್ತಾರೆ. ಸದರಿ ಕಂಪನಿಯ ಉದ್ದೇಶಿತ ಯೋಜನೆಗೆ ಜಮೀನುಗಳನ್ನು ನೀಡಿದ ರೈತರ ಮಕ್ಕಳಿಗೆ ಹಾಗೂ ಸ್ಥಳೀಯರಿಗೆ ಉದ್ಯೋಗವನ್ನು ನೀಡಬೇಕು. ಸದರಿ ಕಂಪನಿಯ ಉದ್ದೇಶಿತ ಯೋಜನೆಯಿಂದ ಯಾವುದೇ ರೀತಿಯಲ್ಲಿ ಅನಾಹುತ ಆಗದಂತೆ ಕ್ರಮಕೈಗೊಳ್ಳಬೇಕು. ವಿದ್ಯಾರ್ಹತೆಗೆ ತಕ್ಕಂತೆ ಭೂಮಿ ನೀಡಿದ ರೈತರ ಮಕ್ಕಳಿಗೆ ಉದ್ಯೋಗ ನೀಡಬೇಕು. ಕಾರ್ಗಿಲ್ ಕಂಪನಿಯಲ್ಲಿ ಭೂಮಿ ಕಳೆದುಕೊಂಡ ರೈತರ ಮಕ್ಕಳಿಗೆ ಸರಿಯಾದ ಉದ್ಯೋಗ ನೀಡಿಲ್ಲ. ಸದರಿ ಕಂಪನಿಯಲ್ಲಿ ವಿದ್ಯಾರ್ಹತೆಗೆ ತಕ್ಕಂತೆ ಉದ್ಯೋಗ ನೀಡಬೇಕು. ಉದ್ದೇಶಿತ ಯೋಜನೆಯಿಂದ ಯಾವುದೇ ರೀತಿಯಲ್ಲಿ ದುರ್ವಾಸನೆ ಬರದಂತೆ, ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರದಂತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕರು. ಭೂ ಪರಿಹಾರ ಮೊತ್ತವನ್ನು ಹೆಚ್ಚುವರಿಯಾಗಿ ನೀಡಬೇಕೆಂದು ಸಭೆಯಲ್ಲಿ ತಿಳಿಸಿದರು.

6. **ಶ್ರೀ ಎನ್.ಹೆಚ್. ಶ್ರೀನಿವಾಸ, ಹರಿಹರ.**

ಇವರು ಸಭೆಯಲ್ಲಿ ಮಾತನಾಡುತ್ತಾ, ಸದರಿ ಕಂಪನಿಯ ಉದ್ದೇಶಿತ ಎಥೆನಾಲ್ ಘಟಕಕ್ಕೆ ಸಂಬಂಧಿಸಿದಂತೆ ಗ್ರಾಮದ ಪ್ರತಿ ಮನೆಯಿಂದ ಒಬ್ಬರಿಗೆ ಉದ್ಯೋಗ ನೀಡಬೇಕು, ಉದ್ದೇಶಿತ ಘಟಕ ಪ್ರಾರಂಭವಾದ ಮೇಲೆ ಎಷ್ಟು ವಾಹನಗಳು ಸಂಚರಿಸುತ್ತವೆ. ಅದಕ್ಕಾಗಿ ರಸ್ತೆಗಳನ್ನು ಸುಧಾರಿಸುವುದು, ಉದ್ದೇಶಿತ ಘಟಕಕ್ಕೆ ಬೇಕಾಗಿರುವ ಕಚ್ಚಾ ವಸ್ತುಗಳ ಬಗ್ಗೆ ನಿರ್ಧರಿಸುವುದು, ರೈತರು ತಿಳಿಸಿದ ಸಮಸ್ಯೆಗಳನ್ನು ಪರಿಹರಿಸಬೇಕು. ಕಚ್ಚಾ ವಸ್ತುಗಳನ್ನು ಸಂಗ್ರಹಿಸಲು ಗೋದಾಮು ನಿರ್ಮಿಸಿಕೊಳ್ಳಬೇಕು. ಉದ್ದೇಶಿತ ಘಟಕಕ್ಕೆ ಶಾಂತಿಸಾಗರದಿಂದ ನೀರು ತರುವ ಬದಲು ನೀರು ಸಂಗ್ರಹಣಾ ತೊಟ್ಟಿಗಳನ್ನು ನಿರ್ಮಿಸಿಕೊಳ್ಳಬೇಕು, ಸ್ಥಳೀಯ ಕಾರ್ಮಿಕರಿಗೆ ಎಲ್ಲಾ ಕೆಲಸದ ಟೆಂಡರ್‌ಗಳನ್ನು ಒದಗಿಸಬೇಕು. ಸದರಿ ಕಂಪನಿಯು ಸರ್ಕಾರಿ ಸ್ವಾಮ್ಯದ್ದಾಗಿರುವುದರಿಂದ ಸ್ಥಳೀಯರಿಗೆ ಖಾಯಂ ಉದ್ಯೋಗವನ್ನು ನೀಡಬೇಕು. ಜಮೀನು ನೀಡಿದ ರೈತರಿಗೆ ಪರಿಹಾರವನ್ನು ಶೀಘ್ರವಾಗಿ ಪಾವತಿಸುವಂತೆ ಕೋರಿದರು.

7. **ಶ್ರೀ ಮಂಜುನಾಥ್, ಹನಗವಾಡಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.**

ಇವರು ಸಭೆಯಲ್ಲಿ ಮಾತನಾಡುತ್ತಾ, ಸದರಿ ಕಂಪನಿಯ ಉದ್ದೇಶಿತ ಯೋಜನೆಗಾಗಿ ಜಮೀನುಗಳನ್ನು ನೀಡಿದ ರೈತರ ಮಕ್ಕಳನ್ನು ಮರೆಯಬೇಡಿ, ಅವರಿಗೆ ಆರಂಭಿಕ ಉದ್ಯೋಗಗಳನ್ನು ನೀಡಿ ಎಂದು ಕೋರಿದರು.

8. **ಶ್ರೀ ಆಂಜನೇಯ ನಾಗನಹಳ್ಳಿ, ಸಾಮಾಜಿಕ ಕಾರ್ಯಕರ್ತರು, ಸಮಗ್ರ ಪರಿವರ್ತನಾ ಸಮುದಾಯ, ಹಾವೇರಿ.**

ಇವರು ಸಭೆಯಲ್ಲಿ ಮಾತನಾಡುತ್ತಾ, ಕಾರ್ಪೋರೇಟ್ ಮೀಸಲು ನಿಧಿಯನ್ನು ರೈತರ ಕುಟುಂಬಗಳು ಮತ್ತು ಸುತ್ತಮುತ್ತಲಿನ ಗ್ರಾಮಗಳ ಕಲ್ಯಾಣಕ್ಕಾಗಿ ಬಳಸಬೇಕು.

9. **ಶ್ರೀ ಸುನಂದ ರೆಡ್ಡಿ, ಹೈದರಾಬಾದ್, ಪರಿಸರವಾದಿ.**

ಇವರು ಸಭೆಯಲ್ಲಿ ಮಾತನಾಡುತ್ತಾ, ಇಂತಹ ಯೋಜನೆಗಳು ಪ್ರಾಂಭಿಸುವುದಕ್ಕೂ ಮುನ್ನ ಯಾವುದೇ ರೀತಿಯಲ್ಲಿ ಪರಿಸರ, ಸಾರ್ವಜನಿಕರ ಮೇಲೆ ಕೆಟ್ಟ ಪರಿಣಾಮ ಬೀರದಂತೆ ಕ್ರಮಕೈಗೊಳ್ಳಬೇಕು. ಆರೋಗ್ಯ ಸುರಕ್ಷತೆ, ಮಳೆ ನೀರು ಸಂಗ್ರಹ, ಮರುಬಳಕೆಗೆ ಹೆಚ್ಚಿನ ಗಮನಹರಿಸಬೇಕು. ಪರಿಸರ ಸಮತೋಲನವನ್ನು ನಿರ್ವಹಿಸುವುದು ಕಡ್ಡಾಯ.

10. **ಶ್ರೀ ಬಿ.ವಿ. ರೆಡ್ಡಿ, ಸಾಮಾಜಿಕ ಕಾರ್ಯಕರ್ತರು.**

ಇವರು ಸಭೆಯಲ್ಲಿ ಮಾತನಾಡುತ್ತಾ, ಉದ್ದೇಶಿತ ಯೋಜನೆಯಲ್ಲಿ ರೈತರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಜಿಲ್ಲಾಡಳಿತದಿಂದ ಸಮನ್ವಯ ಸಮಿತಿ ರಚಿಸುವುದು ಅಗತ್ಯವಾಗಿದೆ. ಎಲ್ಲಾ ಬಗೆಯ ಸಸಿಗಳನ್ನು ನೆಡಲು ಆದ್ಯತೆ ನೀಡಬೇಕು. ರೈತರ ವಿದ್ಯಾವಂತ ಮಕ್ಕಳಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಬೇಕು. ಸಿಎಸ್ಆರ್ ಕಾರ್ಯಕ್ರಮಗಳಲ್ಲಿ ಉದ್ದೇಶಿತ ಘಟಕದ ಸುತ್ತಮುತ್ತಲಿನ ಗ್ರಾಮಗಳನ್ನು ಅಭಿವೃದ್ಧಿಗೊಳಿಸಬೇಕು. ಸುತ್ತಲೂ ಹಸಿರುಕರಣಗೊಳಸುವುದು ಹಾಗೂ ಸಲಹೆಗಳನ್ನು ತೆಗೆದುಕೊಂಡು ಪರಿಹರಿಸಬೇಕೆಂದು ತಿಳಿಸಿದರು.

ಪರಿಸರ ಸಾರ್ವಜನಿಕ ಸಭೆಯ ಅಧ್ಯಕ್ಷರಾದ **ಶ್ರೀ ಜಿ.ಎನ್. ಶಿವಮೂರ್ತಿ, ಭಾ.ಆ.ಸೇ. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ** ಇವರು ಸಭೆಯಲ್ಲಿ ಮಾತನಾಡುತ್ತಾ, ಸದರಿ ಕಂಪನಿಯ ಉದ್ದೇಶಿತ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರು ವ್ಯಕ್ತಪಡಿಸಿರುವ ಅನಿಸಿಕೆ ಮತ್ತು ಸಲಹೆಗಳನ್ನು ಯಥಾವತ್ತಾಗಿ ಸಭೆಯ ನಡಾವಳಿಯೊಂದಿಗೆ ವಿಡಿಯೋ ಸಿಡಿ, ಛಾಯಾ ಚಿತ್ರಗಳನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ರವರ ಮುಖಾಂತರ ಕೇಂದ್ರ ಅರಣ್ಯ, ಪರಿಸರ ಮತ್ತು ಹವಾಗುಣ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ರವಾನಿಸುವುದಾಗಿ ತಿಳಿಸಿದರು.

ಸಭೆಗೆ ಆಗಮಿಸಿದ್ದ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಜಿ.ಎನ್. ಶಿವಮೂರ್ತಿ, ಭಾ.ಆ.ಸೇ.**
ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,
ಜಿಲ್ಲಾ ಪರಿಸರ ಸಾರ್ವಜನಿಕ ಸಮಿತಿ,
ದಾವಣಗೆರೆ ಜಿಲ್ಲೆ.